ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.
The Karnataka State Co-operative Urban Banks Federation Ltd.

**ಸಂಖ್ಯೆ:ಕೆಯುಬಿಎಫ್/255 /2017-18** **ದಿನಾಂಕ:08.08.2017**

**ಇವರಿಗೆ,**
ಅಧ್ಯಕ್ಷರು / ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳಿಗೆ,

**ಮಾನ್ಯರೇ,**

ಮಹಾಮಂಡಳದ ಪತ್ರ ಸಂಖ್ಯೆ:243:2017-18, ದಿನಾಂಕ:31.07.2017ರಂದು ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಪತ್ರ ಬರೆದು ಲೆಕ್ಕಪರಿಶೋಧಕರಿಗೆ ಪಾವತಿಸಬೇಕಾದ ಸಂಭಾವನೆಯನ್ನು ನಿಗದಿಪಡಿಸಿಕೊಳ್ಳುವ ಬಗ್ಗೆ ಸ್ಪಷ್ಟೀಕರಣ ನೀಡಲಾಗಿದೆ. ಮತ್ತು ಸರ್ಕಾರದ ಆದೇಶ ಎಡಿಎಫ್/ಎಡಿಸಿ/52/2012-13 ದಿನಾಂಕ:21.09.2013ರ ಪುಟ ಸಂಖ್ಯೆ:2ರಲ್ಲಿ **"ಪರಂತು ಪಟ್ಟಣ ಸಹಕಾರ ಬ್ಯಾಂಕುಗಳು ಈ ಹಿಂದೆ ಉಲ್ಲೇಖ (4) ಮತ್ತು (5)ರಲ್ಲಿನ ಸರ್ಕಾರಿ ಆದೇಶದಲ್ಲಿ ಸೂಚಿಸಿರುವ ದರಗಳನ್ನು ಗಮನದಲ್ಲಿಟ್ಟುಕೊಂಡು ಲೇಕ್ಕಪರಿಶೋಧಕರ ಸಂಭಾವನೆಯನ್ನು ನಿಗಧಿಪಡಿಸಿಕೊಳ್ಳಬಹುದಾಗಿರುತ್ತದೆ"** ಎಂದು ಮಾರ್ಗಸೂಚಿಗಳಲ್ಲಿ ಉಲ್ಲೇಖಿಸಿರುತ್ತದೆ. ಇದರಂತೆ ಕ್ರಮವಿಡುವುದು.

ಸರ್ಕಾರದ ಆದೇಶ ಸಂಖ್ಯೆ ಸಿಒ.09.ಸಿಎಲ್ಎಂ.2007 ಬೆಂಗಳೂರು ದಿನಾಂಕ:08.03.2017ರ ಆದೇಶದಲ್ಲಿ ರೂ.25 ಕೋಟಿಗಿಂತ ಮೇಲ್ಪಟ್ಟ ಠೇವಣಿಗೆ ರೂ.7,500/-ಗಳಂತೆ ಪ್ರತಿ ಶಾಖೆಗೆ ಸಂಭಾವನೆಯನ್ನು ಪಾವತಿಸಬೇಕೆಂದು ತಿಳಿಸಲಾಗಿತ್ತು. ತದನಂತರ ಸರ್ಕಾರದ ಆದೇಶ ಸಂಖ್ಯೆ : ಸಿಒ:09:ಸಿಎಲ್ಎಂ-2007, ದಿನಾಂಕ:26.07.2007ರಂದು ತಿದ್ದುಪಡಿ ಆದೇಶ ಹೊರಡಿಸಿ ಪ್ರತಿ ಶಾಖೆಗೆ ರೂ.12,000/-ಗಳಂತೆ ಪಾವತಿಸಲು ಆದೇಶಿಸಲಾಗಿದೆ.

ಆದ್ದರಿಂದ ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳು ಸಮವಾಗಿ ಪ್ರತಿ ಶಾಖೆಗಳಿಗೆ ರೂ.12,000/-ಗಳ ಸಂಭಾವನೆಯನ್ನು ಪಾವತಿಸಬೇಕಾಗುತ್ತದೆ.

ಸದರಿ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಪುಂಡಲೀಕ ಎನ್.ಕೇರೂರೆ)
ಮುಖ್ಯಕಾರ್ಯನಿರ್ವಹಣಾಧಿಕಾರಿ

ನಂ.132, ಕೆ.ಎಚ್.ರಸ್ತೆ, ಬೆಂಗಳೂರು- 560 027 No.132, K.H. Road, Bengaluru - 560 027 | P : 080-22233662, 080-22279574
F : 080-22220774 | E : kscubfed@gmail.com | W : http://www.kubfed.com

ಕರ್ನಾಟಕ ಸರ್ಕಾರ

ಸಂಖ್ಯೆ:ಸಿಒ 09 ಸಿಎಲ್ಎಂ 2007

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ 26-07-2007

ತಿದ್ದುಪಡಿ ಆದೇಶ

ಸರ್ಕಾರದ ಆದೇಶ ಸಂಖ್ಯೆ:ಸಿಒ 9:ಸಿಎಲ್ಎಂ:2007 ದಿನಾಂಕ 08-03-2007 ರ ಆದೇಶ ಭಾಗದ ಪಂಕ್ತಿಗಳ ಸಂಖ್ಯೆ: 03 ಅನ್ನು ಈ ಕೆಳಗಿನಂತೆ ಮಾರ್ಪಡಿಸಿದೆ,

'' ಮೇಲಿನ ಪ್ರವರ್ಗಗಳಿಗೆ ಪಟ್ಟಣ ಸಹಕಾರ ಬ್ಯಾಂಕುಗಳು ಶಾಖೆಗಳನ್ನು ಹೊಂದಿದ್ದಲ್ಲಿ ಶಾಖೆಗಳ ಲೆಕ್ಕಪರಿಶೋಧನಾ ಕೆಲಸ ಮತ್ತು ಕೇಂದ್ರೀಕರಣಗೊಳಿಸುವ ಪರಿಶೀಲನಾ ಕಾರ್ಯ ಮುಂತಾದ ಅಂಶಗಳನ್ನು ಪರಿಗಣಿಸಿ ಪ್ರತಿ ಶಾಖೆಗೆ ರೂ.12,000-00 ಗಳಂತೆ ಶಾಖೆಗಳ ಸಂಖ್ಯೆಗನುಗುಣವಾಗಿ ಬ್ಯಾಂಕುಗಳು ಹೆಚ್ಚಿನ ಸಂಭಾವನೆ : ಶುಲ್ಕವನ್ನು 2006-07 ನೇ ಸಾಲಿನಿಂದ ಚಾರ್ಟರ್ಡ್ ಅಕೌಂಟೆಂಟರಿಗೆ ನೇರವಾಗಿ ಪಾವತಿಸತಕ್ಕದ್ದು '' ಅದರಂತೆ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/
(ಆರ್.ಎಸ್.ಕುಂಬ್ಬಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ.

ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ, ಬೆಂಗಳೂರು-4.

ನಂ.17, ಜಂಟಿನಿವಾಸ, ಶಂಕರಮಠ ರಸ್ತೆ, ಬಸವನಗುಡಿ.

ಸಂ:ಎಡಿಎಫ್:80:ಪ.ಬ್ಯಾಂ:ಸಿಎ ಸಂಭಾವನೆ:2006-07 ದಿನಾಂಕ:

ಪ್ರತಿಯನ್ನು:-

ಮೇಲ್ಕಂಡ ಆದೇಶ ಸಂ:ಸಿಒ:9:ಸಿಎಲ್ಎಂ:2007:ದಿನಾಂಕ 8-3-2007 ನ್ನು ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

1) ರೂ.25.00 ಕೋಟಿ ಮೀರಿ ಠೇವಣಿ ಹೊಂದಿರುವ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಮತ್ತು ಇದರ ಲೆಕ್ಕಪರಿಶೋಧನೆ ಕೈಗೊಳ್ಳುವ ಚಾರ್ಟರ್ಡ್ ಅಕೌಂಟೆಂಟ ರವರುಗಳಿಗೆ : ಲೆಕ್ಕಪರಿಶೋಧನೆ-1 ಶಾಖೆಗೆ
2) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರುಗಳಿಗೆ ಮಾಹಿತಿಗಾಗಿ,
3) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಸಹಾಯಕ ನಿರ್ದೇಶಕರುಗಳವರಿಗೆ,
4) ಕೇಂದ್ರ ಕಛೇರಿಯ ಎಲ್ಲಾ ಜಂಟಿ ನಿರ್ದೇಶಕರುಗಳಿಗೆ
5) ಕಛೇರಿಯ ಆದೇಶ ಕಡತಕ್ಕೆ

ಸಹಿ/-
ಜಂಟಿ ನಿರ್ದೇಶಕರು
(ಲೆಕ್ಕಪರಿಶೋಧನೆ-2)